# ಸ್ವಸ್ಥತೆಯ ಸೇವೆಯ ಆರಾಧನಾ ಕ್ರಮ

ಭಾನುವಾರ, ಫೆಬ್ರವರಿ 10, 2019

**ವಿಷಯ: ನನ್ನನ್ನು ಮುಟ್ಟಿದವರಾರು? ಲೂಕ 8:44-46**

**1. ಆರಾಧನೆಗೆ ಕರೆ**

ನಮಗೆ ಬಿಡುಗಡೆಯನ್ನು ಕೊಡುವ, ಸ್ವಸ್ಥಮಾಡುವ ಹಾಗು ನಮಗೆ ನೂತನ ಜೀವನವನ್ನು ದಯಪಾಲಿಸುವ ದೇವರನ್ನು ಆರಾಧಿಸೋಣ, ಬನ್ನಿರಿ, ಕುಂದಿಲ್ಲದ ಪ್ರೀತಿ ಹಾಗು ನಿತ್ಯತ್ವದ ಬಿಡುಗಡೆಯನ್ನು ಕೊಡುವ ಕರ್ತನ ಮೇಲೆ ನಿಮ್ಮ ಚಿಂತಾಬಾರವನ್ನೆಲ್ಲಾ ಹಾಕಿ ಆತನ ಮೇಲೆ ನಿಮ್ಮ ಭರವಸೆಯನ್ನು ಇಡಿರಿ.

**ಓ ಕರ್ತನೇ, ನಮ್ಮ ದೇವರೇ, ನಾವು ನಿನ್ನ ಮೇಲೆ ಭರವಸೆಯನ್ನು ಇಟ್ಟಿದ್ದೇವೆ; ನೀನೇ ನಮ್ಮ ಸಹಾಯಕನೂ ಗುರಾಣಿಯೂ ಆಗಿದ್ದೀ.**

ನೋವು ಮತ್ತು ನರಳಾಟದಲ್ಲಿರುವ ಎಲ್ಲರೂ ಬನ್ನಿರಿ.

**ಓ ಕರ್ತನೇ, ನಮ್ಮ ದೇವರೇ, ನಾವು ನಿನ್ನನ್ನು ಸಹಾಯಕ್ಕಾಗಿ ಕೂಗಿಕೊಂಡೆವು, ನೀನು ನಮ್ಮನ್ನು ಸ್ವಸ್ಥಪಡಿಸಿದಿ.**

ಬನ್ನಿರಿ, ನಮಗೆ ಸ್ವಸ್ಥತೆಯನ್ನು ದಯಪಾಲಿಸಿ ನಮ್ಮ ಪಾಪಗಳನ್ನು ಕ್ಷಮಿಸಿರುವ ದೇವರನ್ನು ಆರಾಧಿಸೋಣ.

**ಓ ಕರ್ತನೇ, ನೀನು ಕ್ಷಮಿಸುವವನೂ ಒಳ್ಳೆಯವನೂ ಆಗಿದ್ದು, ನಿನ್ನ ಬಳಿಯಲ್ಲಿ ಕೂಗಿಕೊಳ್ಳುವವರೆಲ್ಲರನ್ನು ಪ್ರೀತಿಯಲ್ಲಿ ಬಂದಿಸಿ, ನಮಗೆ ಆಹ್ಲಾದಕರವಾದ ಪರಿಹಾರವನ್ನು ಕೊಟ್ಟದ್ದಕ್ಕಾಗಿ, ನಾವು ನಿನ್ನನ್ನು ಗೌರವಿಸಲು ನಮ್ಮ ಸ್ತುತಿಗಳನ್ನು ತೆಗೆದುಕೊಂಡು ನಿನ್ನ ಬಳಿಗೆ ಬಂದಿದ್ದೇವೆ. ಆಮೇನ್.**

**2. ಸುಸ್ವಾಗತ**

**3. ಪ್ರಾರಂಭದ ಪ್ರಾರ್ಥನೆ / ಆ ದಿನಕ್ಕಾಗಿ ಸಂಗ್ರಹಿಸುವುದು**

ಕರುಣಾಮಯನಾದ ದೇವರೇ, ಎಲ್ಲಾ ಸ್ವಸ್ಥತೆಯ ಮೂಲನೇ, ನಾವು ನಿನ್ನ ಬಳಿಗೆ ಬಂದಿದ್ದೇವೆ ಮತ್ತು ನಿನ್ನ ನಂಬಿಗಸ್ಥಿಕೆಯನ್ನು ನೆನಪುಮಾಡಿಕೊಳ್ಳುತ್ತಿದ್ದೇವೆ. ನಾವು ನಿನ್ನ ಮುಖದರ್ಶನವನ್ನು ಬಯಸಿದಾಗೆಲ್ಲಾ, ನೀನು ನಮ್ಮನ್ನು ಸ್ಪರ್ಶಿಸಿ ಸ್ವಸ್ಥಮಾಡಿದ್ದೀ. ನಿನ್ನ ಸ್ಪರ್ಶವನ್ನು ಅನುಭವಿಸುವುದಕ್ಕೆ ನಮಗೆ ಸಹಾಯ ಮಾಡು. ಗೊಂದಲಗಳ ಮಧ್ಯದಲ್ಲಿ ನಮ್ಮ ನಂಬಿಕೆಯನ್ನು ಗುರುತಿಸು. ಪ್ರತಿಕ್ರೀಯೆ ನೀಡಲು ಚಟುವಟಿಕೆಯಲ್ಲಿ ನಿರತವಾಗಿರುವ ನಮ್ಮ ಹೃದಯದ ಆಂತರಿಕ ಕೊಠಡಿಗಳು ನಿರೀಕ್ಷಿಸುತ್ತಿದೆ. ನಿನ್ನ ಕರೆಗೆ ಉತ್ತರವಾಗಿ ನಾವು ನಿನ್ನ ಪ್ರಸನ್ನತೆಗೆ ಬರುವಾಗ ಮತ್ತು ನಮ್ಮ ಜೀವನದಲ್ಲಿ ನಿನ್ನ ವಾಕ್ಯದ ಉದ್ದೇಶಗಳು ನೆರವೇರಲು ನಾವು ಅನೇಕ ಭಾರಿ ಎಡಹುವ ಕಲ್ಲುಗಳಂತಿದ್ದು ಸೋತಿದ್ದೇವೆ ಎಂಬದನ್ನು ಒಪ್ಪಿಕೊಳ್ಳುತ್ತೇವೆ. ಈ ಭೂಮಿಯಲ್ಲಿ ನಿನ್ನ ರಾಜ್ಯವು ಬರುವುದರ ಕುರಿತು ನಮಗೆ ಮಾಹಿತಿ ಮತ್ತು ಸ್ಪೂರ್ತಿಯನ್ನು ಕೊಟ್ಟು ನಡೆಸು. ನಿನ್ನ ಮೇಲಿನ ನಮ್ಮ ನಿರೀಕ್ಷೆ ಹಾಗು ರಕ್ಷಣಾನಂದವನ್ನು ಕೆರಳಿಸು ಮತ್ತು ಸದಾ ಹರಿಯುವ ನದಿಯಂತೆ ನಮ್ಮ ಜೀವನವನ್ನು ಸ್ವಸ್ಥತೆ ಹಾಗು ನಿರೀಕ್ಷೆಯಿಂದ ಬಲಪಡಿಸಿ ನಡೆಸು. ನಾವು ಆರಾದಿಸುವಾಗ ನಮಗೆ ಕಿವಿಗೊಡು ಮತ್ತು ನಾವು ನಿನಗೆ ಕಿವಿಗೊಡಲು ನಮಗೆ ಸಹಾಯ ಮಾಡು. ಆಮೆನ್.

**4. ಪ್ರಾರಂಭದ ಸ್ತುತಿಗೀತೆ :** ಲವ್ ಡಿವೈನ್ ಆಲ್ ಲವ್ಸ್ ಎಕ್ಸೆಲಿಂಗ್

**5. ಅಪೋಸ್ತಲರ ನಂಬಿಕೆ / ನೈಸೆನ್ ನಂಬಿಕೆ / ಉಪಕಾರ ಸ್ಮರಣೆ / ಪಾಪದರಿಕೆ ಮತ್ತು ಕ್ಷಮಾದಾನ** ***(ಪ್ರಾರ್ಥನಾ ವಿಧಿಗನುಸಾರವಾಗಿ)***

## 6. ವೇದ ಪಾರಾಯಣ:

ಮೊದಲನೆಯ ಸತ್ಯವೇದ ಪಾರಾಯಣ: ಯೆಶಾಯ 6:1–8

ಎರಡನೆಯ ಸತ್ಯವೇದ ಪಾರಾಯಣ: ಅಪೋಸ್ತಲರ ಕೃತ್ಯಗಳು 3:1–10

ಮೂರನೆಯ ಸತ್ಯವೇದ ಪಾರಾಯಣ: ಲೂಕ 8:43–48

## 7. ಸ್ವಸ್ಥತೆಯ ಸೇವೆಯ ಪರಿಚಯ:

ಸ್ವಸ್ಥತೆಯ ಸೇವೆಯು ಯೇಸುಕ್ರಿಸ್ತನ ಜೀವನ ಮತ್ತು ಕೆಲಸ, ಉಪನ್ಯಾಸ, ಭೋದನೆ ಮತ್ತು ಕರುಣೆಯ ಮೇಲೆ ಆತುಕೊಂಡಿದ್ದು, ನಮ್ಮನ್ನು ಈ ಲೋಕದಲ್ಲಿನ ಜೀವನವನ್ನು ಪ್ರಾರಂಭಿಸಲು ಅದು ಅನುಕೂಲ ಮಾಡಿಕೊಡುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನದಲ್ಲಿ ಪರಿಪೂರ್ಣನಾಗಿರಬೇಕೆಂಬದೇ ಆತನ ಆಶೆಯಾಗಿರುತ್ತದೆ. ಆದದರಿಂದ ಸ್ವಸ್ಥತೆಯು – ಆತ್ಮೀಕ, ಮಾನಸಿಕ, ದೈಹೀಕ, ಭಾವನಾತ್ಮಕ ಮತ್ತು ಸಾಮಾಜಿಕವಾದ ವಿವಿಧ ಕೋನಗಳನ್ನು ಒಳಗೊಂಡಿದೆ. ಪ್ರಾರಂಭದಿಂದ ಇಂದಿನ ವರೆಗೂ ಸಂಭವಿಸಿದ ಪ್ರತಿಯೊಂದು ಸ್ವಸ್ಥತೆಗೆ ನಮ್ಮ ಕರ್ತನೂ ರಕ್ಷಕನೂ ಆದ ಯೇಸುಕ್ರಿಸ್ತನೇ ಸಂಪನ್ಮೂಲವಾಗಿದ್ದಾನೆ.

ಮೆಡಿಕಲ್ ಮಿಷಿನರೀ ಆಸೋಷಿಯೇಷನ್ ಆಫ್ ಇಂಡಿಯಾ (MMA) ಎಂಬ ಸಂಸ್ಥೆಯ ಮೂಲಕವಾಗಿ 1905ರಲ್ಲಿ ಭಾರತ ದೇಶದಲ್ಲಿ ಸ್ವಸ್ಥತೆಯ ಸೇವೆಯು ಪ್ರಾರಂಭವಾಯಿತು. 1926ರಲ್ಲಿ ಅದು ಕ್ರಿಶ್ಚಿಯನ್ ಮೆಡಿಕಲ್ ಆಸೋಷಿಯೇಷನ್ ಆಫ್ ಇಂಡಿಯಾ CMAI ಎಂಬದಾಗಿ ಮರು ನಾಮಕರಣಗೊಂಡಿತು. ಇಂದು CMAI 300 ಮಿಷನ್ ಆಸ್ಪತ್ರೆಗಳನ್ನು ಒಳಗೊಂಡಿದ್ದು, ಲೂದಿಯಾನ ಮತ್ತು ವೆಲ್ಲೂರ್ ಎಂಬ ಸ್ಥಳಗಳಲ್ಲಿ ಎರಡು ಗೌರವಾನ್ವಿತ ವೈಧ್ಯಕೀಯ ವಿಶ್ವವಿಧ್ಯಾಲಯಗಳನ್ನು ಹೊಂದಿದೆ. ಈ ಸ್ವಸ್ಥತೆಯ ಸೇವೆಯಲ್ಲಿ ಸಮರ್ಪಿಸಿಕೊಂಡ ಸುಮಾರು ಹತ್ತು ಸಾವಿರ ಕ್ರೈಸ್ತ ವೈಧ್ಯಕೀಯ ಉಧ್ಯೋಗಸ್ಥರನ್ನು ಒಳಗೊಂಡಿದೆ. ಅದು ಬಲದಿಂದ ಅಧಿಕ ಬಲಕ್ಕೆ ಹೋಗುತ್ತಾ ನಮ್ಮ ದೇಶದ ವಿವಿಧ ಆರೋಗ್ಯ ಕೇಂದ್ರಗಳ ಅಗತ್ಯತೆಗಳಿಗೆ ನೆರವಾಗುತ್ತಿದೆ. ಉದಾಹರಣೆಗೆ: ಕುಷ್ಟರೋಗ, ಕ್ಷಯರೋಗ, ಮಲೇರಿಯಾ ಜ್ವರ ಪೀಡಿತರು ಹಾಗು ಹೆಚ್ ಐ ವಿ / ಏಯ್ಡ್ಸ್ ಮುಂತಾದ ಅನೇಕ ಕಡೆಗಳಲ್ಲಿ CMAI ಸದಸ್ಯರು ಮುಂಚೂಣಿಯಲ್ಲಿ ಕೆಲಸಮಾಡುತ್ತಿದ್ದಾರೆ. ಭಾರತ ದೇಶದಲ್ಲಿರುವ ಸಭೆಗಳು ನ್ಯಾಯಯುತವಾಗಿ ಅವರ ಸ್ವಸ್ಥತೆಯ ಸೇವೆಗೆ ನೆರವಾಗುತ್ತಾ ಸೇವೆಮಾಡುವುದು ಹಾಗು ನಮ್ಮ ಕರ್ತನೂ ರಕ್ಷಕನೂ ಆದ ಯೇಸುಕ್ರಿಸ್ತನ ಆಜ್ಞೆಯನ್ನು ಪರಿಪಾಲಿಸುತ್ತಾ ಆತನ ಪ್ರೀತಿಗೆ ವಿದೇಯರಾಗಿ ಆರೋಗ್ಯಕರವಾದ ಸಮಾಜವನ್ನು ಕಟ್ಟುವುದು CMAIಯ ಗುರಿಯಾಗಿದೆ.

## 8. ಸೂಚಿಸಿರುವ ಉಪನ್ಯಾಸದ ಪಕ್ಷಿನೋಟ:

**ವಿಷಯ:** *"ನನ್ನನ್ನು ಮುಟ್ಟಿದವರಾರು?"*

**ಪರಿಚಯ :** ಗುಂಪಿನಲ್ಲಿದ್ದ ಯಾರೊ ಒಬ್ಬರು ಇತರರಿಗಿಂತ ಬಿನ್ನವಾಗಿ ಯೇಸುಕ್ರಿಸ್ತನನ್ನು ಮುಟ್ಟಿದರು. ಅದು ಭರವಸೆ ಹಾಗು ನಂಬಿಕೆಯಿಂದ ಮುಟ್ಟಿದ ಬಲಯುತವಾದ ಸ್ವರ್ಶವಾಗಿತ್ತು. ಆ ಸ್ತ್ರೀಯ ನಂಬಿಕೆಯು ಸ್ವಸ್ಥತೆಯ ಶಕ್ತಿಯನ್ನು ಸೆಳೆದುಕೊಂಡಿತು.

ಹಳೆಯ ಒಡಂಬಡಿಕೆ

- ಹಳೆಯ ಒಡಂಬಡಿಕೆಯಲ್ಲಿ, ಯೆಹೂದ ರಾಜ್ಯದ ದಂಗೆಯ ಸ್ವಭಾವದ ಜನರಿಗೆ, ದೇವರು ಆದುಕೊಂಡ ಸಂದೇಶಗಾರನಾಗಲು ಪ್ರವಾದಿಯಾದ ಯೆಶಾಯನು ಸಕಾರಾತ್ಮಕವಾಗಿ ಸ್ಪಂದಿಸುತ್ತಾನೆ. ಆತನ ಶುದ್ಧೀಕರಣಕ್ಕೊಸ್ಕರ ಸೆರಾಫಿಯರಲ್ಲಿ ಒಬ್ಬನು ಯೆಶಾಯನ ಬಳಿಗೆ ಕಳುಹಿಸಿಸಲ್ಪಟ್ಟು,ಯಜ್ಞವೇದಿಯಿಂದ ತಾನು ತಂಡಸದಲ್ಲಿ ತೆಗೆದ ಕೆಂಡವನ್ನು ಆತನ ತುಟಿಗಳಿಗೆ ಮುಟ್ಟಿಸಿದನು. ಈ ಬಲಯುತವಾದ ಸ್ವರ್ಶವು ಯೆಶಾಯನ ಎಲ್ಲಾ ಅಶುದ್ಧತ್ವವನ್ನು ತೆಗೆದುಹಾಕಿ, ಆತನನ್ನು ದೇವರ ಸಂದೇಶಗಾರನಾಗುವಂತೆ ಮಾಡಿತು.

ಹೊಸ ಒಡಂಬಡಿಕೆ

- ಹನ್ನೆರಡು ವರ್ಷದಿಂದ ಶೋಚನೀಯ ಪರಿಸ್ಥಿತಿಯಲ್ಲಿದ್ದ ರಕ್ತಕುಸುಮ ರೋಗಿಯಾಗಿದ್ದ ಸ್ತ್ರೀಯ ಕುರಿತಾಗಿ.
  - ಆಕೆಯು ದೈಹೀಕವಾಗಿ ಬರಿದಾಗಿದ್ದಳು ಹಾಗು ರಕ್ತಶ್ರಾವದ ನಿಮಿತ್ತ ತೀವ್ರ ರಕ್ತಹೀನತೆಗೆ ಒಳಗಾಗಿದ್ದಳು. ಆಕೆಯು ವೈದ್ಯರು ಹಾಗು ಔಷಧಗಳಿಗಾಗಿ ತನ್ನ ಎಲ್ಲಾ ಆರ್ಥಿಕ ಸಂಪನ್ಮೂಲಗಳನ್ನು ಕಳೆದುಕೊಂಡು ದಣಿದಿದ್ದಳು.
  - ಯಾಜಕ ವಿಧಿನಿಬಂಧನೆಗನುಸಾರವಾಗಿ ವಿಧ್ಯುಕ್ತಳಾಗಿ ಅಶುದ್ಧಳೆಂದು ಪರಿಗಣಿಸಲ್ಪಟ್ಟಿದ್ದಳು. ಆದದರಿಂದ ಸಾಮಾಜಿಕವಾಗಿ ಯಾವುದೇ ಆಲಯದಲ್ಲಿ ಆರಾಧಿಸಲು ಆಕೆಗೆ ಅವಕಾಶವಿರಲಿಲ್ಲ. ಒಬ್ಬ ಸ್ತ್ರೀಯು, ಅದರಲ್ಲಿಯೂ ಅಶುದ್ದಳಾದ ಸ್ತ್ರೀಯು ಯಹೂದಿ ರಬ್ಬಿಯನ್ನು ಮುಟ್ಟುವುದನ್ನು ಯಾವುದೇ ಕಾರಣಕ್ಕೆ ಒಪ್ಪಿಕೊಳ್ಳಲು ಸಾಧ್ಯವಿರಲಿಲ್ಲ.
  - ಆದದರಿಂದ ಯೇಸುವಿನ ಬಟ್ಟೆಯ ಗೊಂಡೆಯನ್ನು ಮುಟ್ಟುವುದಕ್ಕಾಗಿ ಆಕೆಯು ಗುಟ್ಟಾಗಿ ಪ್ರಯತ್ನಿಸಿದಳು.
  - ಅದು ಒಬ್ಬ ಸ್ತ್ರೀಯ ಸ್ಪರ್ಶ ಹಾಗು ಆಕೆಯ ನಂಬಿಕೆಯು ಆಕೆಯನ್ನು ಗುಣಪಡಿಸಿತು. ಯೇಸುವಿನಿಂದ ಶಕ್ತಿಯು ಹರಿದುಹೋದಾಗ ಆಕೆಯು ಸ್ವಸ್ಥಳಾಗಿ ಮೊದಲಿನಂತಾದಳು.
  - ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಯೇಸುಕ್ರಿಸ್ತನು ಆ ವ್ಯಕ್ತಿಯ ಅಶುದ್ಧತ್ವವನ್ನು ತಾನೇ ಹೊತ್ತುಕೊಂಡು ಅಶುದ್ದನಾದನು. ಆತನು ತನ್ನನ್ನು ತಾನು ದುರ್ಬಲಗೊಳಿಸಿಕೊಂಡನು ಹಾಗು ಈ ಕಾರಣದಿಂದ ಆತನು ನಮ್ಮ ಪಾಪಗಳನ್ನು ಹೊತ್ತುಕೊಂಡು ಅವಮಾನವನ್ನು ಅನುಭವಿಸುತ್ತಾ ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಅರ್ಪಿಸಿದನು. ಮರಕ್ಕೆ ತೂಗುಹಾಕಲ್ಪಡುವ ವ್ಯಕ್ತಿಯು ದೇವರ ಶಾಪಕ್ಕೆ ಗುರಿಯಾದವನು ಎಂಬದನ್ನು ನಾವು ಧರ್ಮೋಪದೇಶಕಾಂಡ 21:22–23ರಲ್ಲಿ ಓದುತ್ತೇವೆ.
- ಈಗಾಗಲೇ ಆ ಸ್ತ್ರೀಗೆ ತನ್ನ ಸ್ಪರ್ಶದಿಂದ ಗುಣವಾಗಿರುವಾಗ ಆತನು ಯಾಕೆ ನಿಂತನು. ಆಕೆಯ ಅವಸ್ಥೆ ಮತ್ತು ಪರಿಹಾರಕ್ಕಾಗಿ ಗಮನವನ್ನು ತನ್ನೆಡೆಗೆ ಸೆಳೆಯಲು ಯೇಸುಕ್ರಿಸ್ತನು ನಿಲ್ಲಬೇಕಾಯಿತು. ಯಾಕಂದರೆ ಪ್ರಾಮುಖ್ಯತೆ ಹೊಂದಿದ ಯೇಸುಕ್ರಿಸ್ತನು ಇದಕ್ಕೆ ಅಡ್ಡಿಪಡಿಸಲಿಲ್ಲವೆಂಬದನ್ನು ಆಕೆಯು ತಿಳಿದುಕೊಳ್ಳಬೇಕಾಗಿತ್ತು. ಯಾರಾದರೊಬ್ಬರು ಆಕೆಯನ್ನು "ಮಗಳೇ" ಎಂದು ಕರೆಯುವುದು ಹಾಗು ಆಕೆಯ ನಂಬಿಕೆಯನ್ನು ದೃಡೀಕರಿಸಿ ಸಮಾಧಾನದಿಂದ ಆಕೆಯನ್ನು ಮನೆಗೆ ಕಳುಹಿಸುವ ಅಗತ್ಯತೆಯಿತ್ತು (ಲೂಕ 8:48). ಯೇಸುವು ತನ್ನ ದಯಾಪೂರ್ವಕವಾದ ಮಾತುಗಳಿಂದ ಆಕೆಯ ಸ್ವಸ್ಥತೆಯನ್ನು ಆಳವಾಗಿ ವಿಸ್ತರಿಸುವುದು ಅಗತ್ಯವಾಗಿತ್ತು.

**ಮುಕ್ತಾಯ:**

- ದೇವರ ಸ್ವಸ್ಥತೆಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಒಬ್ಬ ವ್ಯಕ್ತಿಯು, ಮಹಾ ಸ್ವಸ್ಥತೆಯನ್ನುಂಟುಮಾಡುವ ಮಹಾನ್ ವ್ಯಕ್ತಿಯ ಬಟ್ಟೆಯ ಗೊಂಡೆಯನ್ನು ಮುಟ್ಟುವುದಕ್ಕಾಗಿ ಆತನನ್ನು ಸಮೀಪಿಸುವುದು ಅವಶ್ಯವಾದದ್ದು. ನಮಗೆ ತಮ್ಮ ಒಳಗಿರುವ ನೋವು ಹಾಗು ದುಖಃವನ್ನು ತಿಳಿಸದೆ ನಮ್ಮನ್ನು ಸಮೀಪಿಸುವವರಿಗೆ ನಾವು ಹೇಗೆ ಸ್ಪಂದಿಸಬೇಕು? ನಾವು ಭೌತಿಕ ಅಗತ್ಯತೆಗಳ ಅಂಚಿನಲ್ಲಿರುವ ಅಥವ ಕಳಂಕಿತರಾಗಿ ಸಮಾಜದಿಂದ ದೂರವಿರುವ ಜನರನ್ನು ನಾವು ಸ್ಪರ್ಶಿಸಬೇಕೋ? ಸೋಂಕಿತ ಗಾಯಗಳು, ಚರ್ಮ ರೋಗಗಳು, HIV/AIDS ಹಾಗು ವಿರೂಪಗೊಂಡಿರುವ ಕಾರಣ ಜನರು ಅವರನ್ನು ಅಸ್ಪ್ರಶ್ಯರೆಂದು ದೂರವಿರಿಸಿರುವಾಗ, ನಾವು ಯಾವ ರೀತಿಯಲ್ಲಿ ಪ್ರತಿಕ್ರೀಯೆ ತೋರಿಸಬೇಕು? ಅಂತಹ ಜನರನ್ನು ನಾವು ದೂರವಿರಿಸುವುದು ಹಾಗು ಅವರನ್ನು ಮತ್ತೊಬ್ಬರ ಬಳಿಗೆ ಎಸೆದುಬಿಡುವುದು ಬಹಳ ಸುಲಬ. ಆದರೆ ಜೀವನದ ಅಂಚಿನಲ್ಲಿರುವ ಹಾಗು ಸಮಾಜವು ದೂರವಿರಿಸಿರುವವರ ಕುರಿತು ಯೇಸುಕ್ರಿಸ್ತನು ತೋರಿದ ಪ್ರೀತಿಯ ಮಾದರಿಯನ್ನು ಅನುಕರಿಸುವುದು ಯುಕ್ತವಾದದ್ದು. ಅಂತಹ ಅಗತ್ಯತೆಯಲ್ಲಿರುವವರನ್ನು ನಮ್ಮ ಆಸ್ಪತ್ರೆಗಳು ಹಾಗು ಸಭೆಗಳು ಸ್ವಾಗತಿಸುತ್ತಿವೆಯೋ? ಯೇಸುಕ್ರಿಸ್ತನು ಹೀಗೆ ಹೇಳಿದನು, "ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ, ಕ್ಷೇಮವಿಲ್ಲದವರಿಗೆ ಬೇಕು" (ಮತ್ತಾಯ 9:12).ನಾವು ನಮ್ಮ ನೆರೆಯವರಿಗೆ ಒಳ್ಳೆಯ ಸಮಾರ್ಯದವರಾಗಿದ್ದೇವೋ? ನಾವು ಹೃದಯದಲ್ಲಿ ಕರುಣೆಯುಳ್ಳವರಾಗಿ ಅಗತ್ಯತೆಯಲ್ಲಿರುವ ಜನರಿಗೆ ಸ್ವಸ್ಥತೆಯನ್ನು ಕೊಡಲು ಸಿದ್ದರಾಗಿದ್ದೇವೋ?

**ಪ್ರಾರ್ಥನೆ:**

## 9. ಮಧ್ಯಸ್ಥಿಕೆ

L : ಪ್ರೀಯ ಕರ್ತನೇ, ನಿನ್ನ ಸ್ವಸ್ಥತೆಯ ಸ್ಪರ್ಶವನ್ನು ಹೊಂದುವುದಕ್ಕಾಗಿ ಈ ಹೊತ್ತು ನಾವು ನಿನ್ನ ಬಳಿಗೆ ಬಂದಿದ್ದೇವೆ. ನಿನಗೆ ಎಲ್ಲವೂ ಸಾಧ್ಯವೇ. ನಮ್ಮ ಹೃದಯಗಳನ್ನು ನಿನ್ನ ಹಿಡಿತದಲ್ಲಿಟ್ಟುಕೊಂಡು ನಮ್ಮ ಮನಸ್ಸು, ಶರೀರ ಹಾಗು ಆತ್ಮವನ್ನು ಉಜ್ಜೀವನಗೊಳಿಸು. ತಪ್ಪಿಹೋದ ಕುರಿಯಂತೆ ನಾವು ನಿನ್ನ ಕೃಪೆಯನ್ನು ಎದುರುನೋಡುತ್ತಾ ನಿನ್ನ ಬಳಿಗೆ ಬಂದಿದ್ದೇವೆ. ನಮ್ಮ ಜೀವನ ಯಾತ್ರೆಯಲ್ಲಿ ನೀನು ನಡೆಸುವ ಮಾರ್ಗದಲ್ಲಿ ನಾವು ನಂಬಿಕೆಯಿಂದ ನಡೆಯುವಂತೆ ನಮ್ಮನ್ನು ಮುನ್ನಡೆಸು.

**ಎಲ್ಲರೂ : ಕರ್ತನೇ, ನಿನ್ನ ಕರುಣೆಯಿಂದ ನಮ್ಮ ಪ್ರಾರ್ಥನೆಗೆ ಕಿವಿಗೊಡು.**

L : ಪರಲೋಕದಲ್ಲಿರುವ ತಂದೆಯೇ, ನಮ್ಮ ಮಧ್ಯದಲ್ಲಿ ಜೀವಿಸಿ ಬಾಧೆಪಟ್ಟು ಮರಣ ಹೊಂದುವುದಕ್ಕಾಗಿ ನೀನು ನಿನ್ನ ಮಗನನ್ನು ದಯಪಾಲಿಸಿದಿ. ಆತನ ಗಾಯಗಳಿಂದ ನಮಗೆ ಗುಣವಾಯಿತು. ಕರ್ತನಾದ ಯೇಸುವೇ, ನೀನು ಈ ಲೋಕದಲ್ಲಿ ಜೀವಿಸಿದಾಗ ರೋಗಿಗಳನ್ನು ಗುಣಪಡಿಸಿದೆ, ಬಡವರನ್ನು ಕನಿಕರಿಸಿದೆ. ವಿಶೇಷವಾಗಿ, ನೀನು ನಮ್ಮನ್ನು ಪ್ರೀತಿಸಿದ ಮೇರೆಗೆ ದಾದಿಗಳು ಹಾಗು ಸ್ವಸ್ಥಮಾಡುವ ಕಾರ್ಯಕರ್ತರನ್ನು ಹಾಗು ಯಾರ್ಯಾರು ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಾರೂ ಅವರನ್ನು, ವೃದ್ಧಾಶ್ರಮ ಮತ್ತು ಮನೆಗಳಲ್ಲಿ ಆರೈಕೆ ಮಾಡುವವರನ್ನು ಮತ್ತು ನಮ್ಮ ಕಾಳಜಿಯಲ್ಲಿರುವವರನ್ನು ನಾವೂ ಸಹ ಪ್ರೀತಿಸಲು ನಮಗೆ ಸಹಾಯ ಮಾಡು. ಪ್ರೀತಿಸ್ವರೂಪನಾದ ದೇವರೇ, ಅವರು ತಮ್ಮಲ್ಲಿರುವ ಉತ್ತಮವಾದುದ್ದನ್ನು ಕೊಡಲು ಶಕ್ತರಾಗುವುದಕ್ಕಾಗಿ ಪ್ರೀತಿಯಿಂದ ಮಾತಾಡುವುದಕ್ಕಾಗಿ ಹಾಗು ಧೈರ್ಯದಿಂದ ಕಾರ್ಯಮಾಡುವುದಕ್ಕಾಗಿ ಅವರನ್ನು ಸ್ಪರ್ಶಿಸು. ನೀನು ಕೊಟ್ಟ ಎಲ್ಲಾ ವರಗಳನ್ನು ಉಪಯೋಗಿಸಿಕೊಂಡು ಉತ್ತಮ ಪಾರುಪತ್ಯಗಾರರಾಗುವಂತೆ ಮಾಡು. ಅವರು ಬಲಹೀನರಾದ ಹಾಗು ದಣಿದ ಜೀವಗಳನ್ನು ಉಜ್ಜೀವಿಸಲು ಶಕ್ತರಾಗುವಂತೆ ಮಾಡು.

**ಎಲ್ಲರೂ : ಕರ್ತನೇ, ನಿನ್ನ ಕರುಣೆಯಿಂದ ನಮ್ಮ ಪ್ರಾರ್ಥನೆಗೆ ಕಿವಿಗೊಡು.**

L : ರೋಗಿಗಳು, ಬಲಹೀನರು ಹಾಗು ತೊಂದರೆಗೊಳಗಾದವರಿಗಾಗಿ ನಾವು ಪ್ರಾರ್ಥಿಸುತ್ತಿದ್ದೇವೆ. ವಿಶೇಷವಾಗಿ ನಿನ್ನ ಮೇಲೆ ಮಾತ್ರ ಭರವಸೆಯನ್ನು ಇಟ್ಟಿರುವ ಹಾಗು ರೋಗದ ಸೋಂಕಿಗೆ ಒಳಗಾಗಿರುವ ಮಕ್ಕಳಿಗಾಗಿ ಪ್ರಾರ್ಥಿಸುತ್ತಿದ್ದೇವೆ. ಅವರ ಜೀವನದಲ್ಲಿ ಸ್ವಸ್ಥತೆ ಹಾಗು ಪರಿಶುದ್ಧತೆಯನ್ನು ಕೊಟ್ಟು – ಅವರು ನಿನ್ನ ಪ್ರಸನ್ನತೆಯನ್ನು ಗ್ರಹಿಸುವಂತೆ ಮಾಡು, ಅವರು ನಿನ್ನ ಶಕ್ತಿಯನ್ನು ಅನುಭವಿಸುವಂತೆ ಮಾಡು, ಅವರು ನಿನ್ನ ಪ್ರಿತಿಯನ್ನು ತಿಳಿದುಕೊಳ್ಳುವಂತೆ ಮಾಡು, ಅವರ ಶರೀರವು ಬೆಳಕು ಮತ್ತು ಸತ್ಯದಿಂದ ತುಂಬುವಂತೆ ಮಾಡು.ರೋಗಿಗಳಾದ ಪ್ರೀಯರಿಗಾಗಿ ನಾವು ಪ್ರಾರ್ಥಿಸುತ್ತಿದ್ದೇವೆ. ಅವರು ರೋಗಿಗಳ ಮುತುವರ್ಜಿಯನ್ನು ತೆಗೆದುಕೊಳ್ಳುವಾಗ, ನೀನು ಅವರಿಗೆ ಸಮಯೋಚಿತವಾದ ಸಹಾಯವನ್ನು ಕೊಡುವುದರ ಮೂಲಕವಾಗಿ ಅವರ ನಿರೀಕ್ಷೆ ಮತ್ತು ಬಲಕ್ಕೆ ಸಂಕೇತವಾಗಿರು.

**ಎಲ್ಲರೂ : ಕರ್ತನೇ, ನಿನ್ನ ಕರುಣೆಯಿಂದ ನಮ್ಮ ಪ್ರಾರ್ಥನೆಗೆ ಕಿವಿಗೊಡು.**

L : ಸರ್ವಶಕ್ತನಾದ ದೇವರೇ, ಎಲ್ಲಾ CMAI ಸಂಸ್ಥೆಗಳೂ, ದೇಶದಾದ್ಯಂತ ಇರುವ ಎಲ್ಲಾ ಪ್ರತ್ಯೇಕ ವ್ಯಕ್ತಿಗಳೂ – ನರಳುತ್ತಿರುವ ಹಾಗು ದುಃಖಿತರಾದ ರೋಗಿಗಳಿಗೆ ನಿನ್ನ ಮಗನಾದ ಯೇಸುಕ್ರಿಸ್ತನು ತೋರಿದ ಪ್ರೀತಿಯನ್ನು ತೋರುವಂತೆ ಮಾಡು. ನಮ್ಮ ದೇಶದಲ್ಲಿ ಕಡಿಮೆ ಸೌಲಭ್ಯವುಳ್ಳ ಹಾಗು ಅಳಿವಿನ ಅಂಚಿನಲ್ಲಿರುವ ಜನರಿಗಾಗಿ, ಕ್ರಿಸ್ತನ ಹೆಜ್ಜೆಗುರುತನ್ನು ಅನುಕರಿಸುವವರಾದ ನಾವು ಈ ಪ್ರಾರ್ಥನೆಯನ್ನು ಮಾಡುತ್ತಿದ್ದೇವೆ, ಓ ಕರ್ತನೇ, ನಮ್ಮ ಮೇಲೆ ನಿನ್ನ ಮುಖಪ್ರಕಾಶವು ಬೆಳಗುತ್ತಿರುವುದನ್ನು ಮುಂದುವರೆಸು. ನಾವು ನಂಬಿಕೆಯಲ್ಲಿ ದೃಡವಾಗಿರಲು ನಮಗೆ ಸಹಾಯಮಾಡು. ಆಗ ನಾವು ನಿನ್ನ ಶಕ್ತಿಯನ್ನು ಹೀರಿಕೊಂಡು ಜನರಿಗೆ ಸೇವೆಮಾಡಲು ಸಾಧ್ಯವಾಗುತ್ತದೆ.

**ಎಲ್ಲರೂ : ಕರ್ತನೇ, ನಿನ್ನ ಕರುಣೆಯಿಂದ ನಮ್ಮ ಪ್ರಾರ್ಥನೆಗೆ ಕಿವಿಗೊಡು.**

L : ಭಾರತದಲ್ಲಿರುವ ಸಭೆಗಳ ಸಹಾಯ ಹಸ್ತವಾಗಿ, ನಿಜವಾಗಿಯೂ ಸೇವೆಮಾಡುತ್ತಿರುವ CMAI ಗಾಗಿ ನಾವು ಪ್ರಾರ್ಥಿಸುತ್ತಿದ್ದೇವೆ. ವೈದ್ಯಕೀಯ ಸೇವೆಯಲ್ಲಿರುವ ಅನೇಕ ಸಭೆಗಳು, ವೈದ್ಯರು, ದಾದಿಗಳು, ಮೈತ್ರಿಯ ಆರೋಗ್ಯ ವೃತ್ತಿಪರರು, ಪಾದ್ರಿಗಳು, ವ್ಯವಸ್ಥಾಪಕರು ಹಾಗು ಬಡವರು, ಅಂಗವಿಕಲರು ಮತ್ತು ತಿರಸ್ಕಾರಕ್ಕೆ ಒಳಗಾದವರಿಗಾಗಿ ಶ್ರಮವರಿಯದೆ ಕಾಳಜಿವಹಿಸಿ ದುಡಿಯುತ್ತಿರುವವಲ್ಲರನ್ನು ನಿನಗೆ ಸಮರ್ಪಿಸುತ್ತಿದ್ದೇವೆ. ಅವರಲ್ಲಿ ಕನಿಕರವನ್ನು ಹುಟ್ಟಿಸು ಮತ್ತು ಅವರು ನಿನ್ನ ಪ್ರತಿನಿಧಿಗಳಾಗಿ ಸ್ವಸ್ಥತೆಯ ಸ್ಪರ್ಶ ಮಾಡುವವರಾಗುವಂತೆ ಅವರನ್ನು ಮಾರ್ಪಡಿಸೆಂದು ನಾವು ಪ್ರಾರ್ಥಿಸುತ್ತಿದ್ದೇವೆ. ಅವರಿಗೆ ಜ್ಞಾನ, ಧೈರ್ಯ ಹಾಗು ದೃಢತೆಯನ್ನು ದಯಪಾಲಿಸು. ನಾವು ನಿನಗೆ ಸೇವೆಮಾಡುವಾಗ ನಮ್ಮನ್ನು ನಿನ್ನ ಪ್ರೀತಿ ಹಾಗು ಕೃಪೆಯಿಂದ ಸ್ಪರ್ಶಿಸು.

**ಎಲ್ಲರೂ : ಕರ್ತನೇ, ನಿನ್ನ ಕರುಣೆಯಿಂದ ನಮ್ಮ ಪ್ರಾರ್ಥನೆಗೆ ಕಿವಿಗೊಡು.**

(ನಾಯಕನು ಇತರ ಪ್ರಾರ್ಥನಾ ಮನವಿಗಳನ್ನು ಸೇರಿಸಬಹುದು ಹಾಗು ಮುಕ್ತಾಯ ಪ್ರಾರ್ಥನೆಯನ್ನು ಮಾಡಬಹುದು)

ಹಾಡು (ಕಾಣಿಕೆಯನ್ನು ಸಂಗ್ರಹಿಸುವುದು)

*(ಕರ್ತನ ಮೇಜನ್ನು ಆಚರಿಸುವುದಾದರೆ, ದಯವಿಟ್ಟು ಭೋಜನದ ಆಚರಣೆಯ ಪ್ರಾರ್ಥನಾ ವಿಧಿಯನ್ನು ಮುಂದುವರೆಸಿರಿ. ಮತ್ತು ಮುಕ್ತಾಯ ಪ್ರಾರ್ಥನೆ ಹಾಗು ಆಂತ್ಯಾಶೀರ್ವಾದವನ್ನು ಕೊಡಿರಿ)*

**ಕಾಣಿಕೆಯನ್ನು ಸ್ವಸ್ಥತೆಯ ಸೇವೆಯ ಭಾನುವಾರದಂದು ಸ್ವೀಕರಿಸಿ, ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ:**
**CMAI ಕಛೇರಿ, ಪ್ಲಾಟ್ ನಂ. 2, A-3 ಲೋಕಲ್ ಶಾಪಿಂಗ್ ಸೆಂಟರ್, ಜನಕ್‌ಪುರಿ, ನ್ಯೂ ಡೆಲ್ಲಿ**
**ಡಿಮ್ಯಾಂಡ್ ಡ್ರಾಫ್ಟ್ / ಚೆಕ್ ನ್ನು 'CMAI, New Delhi' ಹೆಸರಿನಲ್ಲಿ ಕಳುಹಿಸಬಹುದು.**

**ನೀವು ಆಸ್ಪತ್ರೆಗಳಿಗೆ ನೇರವಾಗಿ ಹಣಸಂದಾಯ ಮಾಡುವುದನ್ನು ಆಯ್ಕೆಮಾಡಿಕೊಂಡರೆ, ನೀವು ಕಛೇರಿಯ ದಾಖಲೆಗಾಗಿ ದಯವಿಟ್ಟು cmai@cmai.org ಮತ್ತು imtimenla@cmai.org ಎಂಬ ನಮ್ಮ ಇ-ಮೇಲ್ ವಿಳಾಸಕ್ಕೆ ಬರೆದು ತಿಳಿಸಿರಿ.**